O.S .No.425/2015
PW-1

ದಿನಾಂಕ: 20.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್. ವಕೀಲರಿಂದಃ**

ನಿಂಗೇಗೌಡ ಬಿನ್ ನಿಂಗೇಗೌಡ 1996 ರಿಂದ ಗೊತ್ತು. ಸದರಿಯವರು ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ಅಕ್ಕಪಕ್ಕದ ಜಮೀನಿನವರು ಎಂದು ಹೇಳುತ್ತಾರೆ. ನಮಗೆ ಸೇರಿದ ಜಮೀನಿನ ಸ.ನಂ.47/34, 4 ಎಕರೆ ವಿಸ್ತೀರ್ಣ ಇದೆ. ದಾವೆಯನ್ನು ಖಾತೆ ಮಾಡಲು ತೊಂದರೆ ಕೊಟ್ಟಿದ್ದರಿಂದ ಹೂಡಿರುತ್ತೇನೆ. ದಾವಾ ಆಸ್ತಿ ನಿಂಗೇಗೌಡ ಬಿನ್ ನಿಂಗೇಗೌಡ ರವರಿಗೆ ಸೇರಿದ್ದು ಎಂದರೆ ಸರಿ. 1 ರಿಂದ 4 ನೇ ಪ್ರತಿವಾದಿಗಳು ನಿಂಗೇಗೌಡ ಬಿನ್ ನಿಂಗೇಗೌಡ ರವರು ಹೆಂಡತಿ, ಮಕ್ಕಳು, ಮೊಮ್ಮಕ್ಕಳು ಎಂದರೆ ಸರಿ.

ದಾವಾ ಆಸ್ತಿಯ ಪಹಣಿ, ಖಾತೆ ನಿಂಗೇಗೌಡ ಬಿನ್ ನಿಂಗೇಗೌಡ ರವರ ಹೆಸರಿನಲ್ಲೇ ಇದೆ ಎಂದರೆ ಸರಿ. ನಿಪಿ-6 ರಲ್ಲಿ ನಿಂಗೇಗೌಡ ಬಿನ್ ನಿಂಗೇಗೌಡ ಎಂದು ನಮೂದು ಇದೆ ಎಂದರೆ ಸರಿ. ದಾವಾ ಆಸ್ತಿ ನಿಂಗೇಗೌಡ ಬಿನ್ ನಿಂಗೇಗೌಡ ರವರಿಗೆ ದರಕಾಸ್ತು ಮೂಲಕ ಬಂದಿದ್ದು ಎಂದರೆ ಸಾಕ್ಷಿ ಸಾಗುವಳಿ ಮೂಲಕ ಬಂದಿದ್ದು ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮೇಲೆ ರೂ.34,400/- ರೂ.ಗಳನ್ನು ನಿಂಗೇಗೌಡ ಬಿನ್ ನಿಂಗೇಗೌಡ ರವರ ಪರವಾಗಿ ಸಾಲ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ, ಅವರು ನಮಗೆ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಏನು ಬರೆದುಕೊಟ್ಟಿದ್ದಾರೆಂದರೆ ಸಾಕ್ಷಿ ಸಾಮಾನ್ಯ ಮುಖ್ತಾರುನಾಮೆ ಹಾಗೂ ಕ್ರಯ ಪತ್ರ ಎರಡನ್ನೂ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಸಾಮಾನ್ಯ ಮುಖ್ತಾರುನಾಮೆಯಾದ ಮೇಲೆ ನೀವು ಸಾಲ ಪಡೆದಿರುತ್ತೀರಿ ಎಂದರೆ ಸರಿ.

ಮೀನಾಕ್ಷಿ ಎಂದರೆ ನನ್ನ ಹೆಂಡತಿ. ಅವರಿಗೂ, ದಾವಾ ಆಸ್ತಿಗೂ ಏನು ಸಂಬಂಧ ಎಂದರೆ ಸಾಕ್ಷಿ ನನ್ನ ಆಸ್ತಿ ಅವರಿಗೂ ಸೇರಿದ್ದು ಎಂದು ಹೇಳುತ್ತಾರೆ. ನಿಂಗೇಗೌಡ ಬಿನ್ ನಿಂಗೇಗೌಡ ರವರು ಮುಖ್ತಾರುನಾಮೆಯನ್ನು ನನಗೆ ಮಾತ್ರ ಬರೆದುಕೊಟ್ಟಿರುತ್ತಾರೆ. ನೀವು ಮುಖ್ತಾರುನಾಮೆಯ ಆಧಾರದ ಮೇಲೆ ಕಾವೇರಿ ಗ್ರಾಮೀಣ ಬ್ಯಾಂಕ್, ಆಸ್ಪತ್ರೆ ಕಾವಲ್ ನಲ್ಲಿ ಸಾಲ ಪಡೆದಿರುತ್ತೀರಿ ಎಂದರೆ ಸರಿ.

ನಿಪಿ-15 ನ್ನು ಉಪನೊಂದಣಾ ಕಚೇರಿಯ ಬಳಿ ಬರೆದುಕೊಟ್ಟಿರುತ್ತಾರೆ. ನಿಪಿ-15 ಕ್ರಯದ ಕರಾರು ಎಂದರೆ ಸಾಕ್ಷಿ ನಾನು ಮೂಡಾತ್ಮನಾದ್ದರಿಂದ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ-15 ರ ಆಧಾರದ ಮೇಲೆ ಖಾತೆ, ಪಹಣಿಯಾಗಿಲ್ಲ ಎಂದರೆ ಸರಿ. ಸಾಕ್ಷಿ

ಖಾತೆ ಮಾಡಿಸಲು ಹೋದಾಗಲೇ ತೊಂದರೆ ಕೊಟ್ಟಿದ್ದು  ಎಂದು ಹೇಳುತ್ತಾರೆ. ಪ್ರತಿವಾದಿಗಳು ಯಾವ ತಿಂಗಳು, ವರ್ಷದಂದು ತೊಂದರೆ ಕೊಟ್ಟರು ಎಂದರೆ ಸಾಕ್ಷಿ ಈಗ್ಗೆ 9 ವರ್ಷಗಳ ಹಿಂದೆ ತೊಂದರೆ ಕೊಟ್ಟಿರುತ್ತಾರೆ  ಎಂದು ಹೇಳುತ್ತಾರೆ.  ಪ್ರತಿವಾದಿಗಳು ತೊಂದರೆ ಕೊಟ್ಟಿದ್ದನ್ನು ನೋಡಿದವರು ಆಜುಬಾಜುದವರಾದ ನಾಗೇಗೌಡ ಇದ್ದಾರೆ ಎಂದು ಹೇಳುತ್ತಾರೆ.

ನಿಪಿ-1 ನ್ನು  ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ತಕರಾರು ನೀಡಿರುತ್ತೀರಿ ಎಂದರೆ  ಸರಿಯಲ್ಲ. ನಿಮಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವೆ ಹೂಡುವ ಕಾಲಕ್ಕೆ ಎಕರೆ 15 ಸಾವಿರ ಇತ್ತು. ದಾವೆ ಹೂಡುವ ಕಾಲಕ್ಕೆ ಎಕರೆ 2 ಲಕ್ಷ ರೂ. ಬೆಲೆ ಬಾಳುತ್ತಿತ್ತು  ಎಂದರೆ  ಸರಿಯಲ್ಲ. ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ  ಎಂದರೆ  ಸರಿಯಲ್ಲ. ನೀವು 1996 ರಲ್ಲಿ ದಾವಾ ಆಸ್ತಿಯ ಮೇಲೆ 34 ಸಾವಿರ ರೂ.ಗಳ ಸಾಲ ಪಡೆದಿರುತ್ತೀರಿ ಎಂದರೆ ಸರಿ. ಬ್ಯಾಂಕಿನಲ್ಲಿ ಸಾಲ ಕೊಡಬೇಕಾದರೆ ಸಾಲವನ್ನು ಜಮೀನಿನ ಅರ್ಧ ಭಾಗದಷ್ಟು ಬೆಲೆ ನೀಡುತ್ತಾರೆಂದರೆ ಸರಿ. ಸಾಲವನ್ನು ಏನು ಬೆಳೆ ಬೆಳೆಯುತ್ತಿರೋ ಅದರ ಆಧಾರದ ಮೇಲೆ ನೀಡಲಾಗುತ್ತದೆಂದರೆ ಸರಿ. ದಾವಾ ಆಸ್ತಿಯನ್ನು ಅರಿಶಿನ ಮತ್ತು ಬಾಳೆ ಬೆಳೆಯಲು ಪಡೆದಿರುತ್ತೇನೆ. ನಿಪಿ-4 ಬ್ಯಾಂಕಿಗೆ ದಾವಾ ಆಸ್ತಿ ಮತ್ತು ಪಕ್ಕದ ಆಸ್ತಿಯನ್ನು ಆಧಾರದ ಮಾಡಿದ ಮೇರೆಗೆ ಮುಟೇಶನ ಮಾಡಲಾಗಿದೆ ಎಂದರೆ ಸರಿ. ನಿಪಿ-5 ನ್ನು ನೀವೇ ಎಲ್ಲ ಬ್ಯಾಂಕಿಗೆ ಹೋಗಿ ಬರೆಸಿಕೊಂಡು ಬಂದಿದ್ದು ಎಂದರೆ ಸರಿ. ನಿಪಿ-5 ರಲ್ಲಿ ಯಾವುದೇ ಜಮೀನಿನ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-4, 5 ಮತ್ತು ದಾವೆಗೂ ಸಂಬಂಧ ಇಲ್ಲ  ಎಂದರೆ  ಸರಿಯಲ್ಲ. ನಿಪಿ-5 ದಾಖಲಾತಿಯನ್ನು ಸಾಲ ತೆಗೆಯುವ ಪೂರ್ವದಲ್ಲಿ ಪಡೆದ ದಾಖಲಾತಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಲ ತೆಗೆಯುವ ಮುಂಚಿತವಾಗಿ ಬೇರೆ ಬ್ಯಾಂಕಿಗಳಲ್ಲಿ ಸಾಲ ಇಲ್ಲದ ಬಗ್ಗೆ ದೃಢೀಕರಣ ಪಡೆದಿರುವುದು  ಎಂದು ಹೇಳುತ್ತಾರೆ.

ಯಾರ್ಯಾರ ಹೆಸರಿನಲ್ಲಿ ಜಮೀನು ಇರುತ್ತದೋ, ಅವರ ಹೆಸರಿನಲ್ಲಿ ಖಾತೆ ಪಹಣಿ ಇರುತ್ತದೆಂದರೆ ಸರಿ. ಪಹಣಿಯಲ್ಲಿ ಏನು ಬೆಳೆ ಬೆಳೆಯುತ್ತೇವೆಯೋ ಅದನ್ನು ನಮೂದಿಸಲಾಗುತ್ತದೆಂದರೆ ಸರಿ. 2015 ರಲ್ಲಿ ದಾವಾ ಆಸ್ತಿಯಲ್ಲಿ ರಾಗಿ ಬೆಳೆ ಬೆಳೆಯುತ್ತಿದ್ದೆ. ನೀವು ರಾಗಿ ಬೆಳೆ ಬೆಳೆಯುತ್ತಿದ್ದುದ್ದನ್ನು ನೋಡಿದವರು ಇದ್ದಾರಾ ಎಂದರೆ ಸಾಕ್ಷಿ ಇದ್ದಾರೆ  ಎಂದು ಹೇಳುತ್ತಾರೆ. ನೀವು ನಿಪಿ-6 ರಂತೆ ಯಾವುದೇ ಬೆಳೆ ಬೆಳೆದಿಲ್ಲ ಎಂದರೆ  ಸರಿಯಲ್ಲ. ಸಾಕ್ಷಿ ಮುಂದುವರೆದು 2 ಕೊಳವೆ ಬಾವಿ ಹಾಕಿಸಿದ್ದೇನೆ  ಎಂದು

ಹೇಳುತ್ತಾರೆ. ಕೊಳವೆ ಬಾವಿಯನ್ನು ಯಾವಾಗ ಹಾಕಿಸಿದ್ದೇನೆಂದು ಮರೆತಿದ್ದೇನೆ ಎಂದು ಹೇಳುತ್ತಾರೆ. ಕೊಳವೆ ಬಾವಿ ತೆಗೆಸಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ-6 ರಲ್ಲಿ ಕೊಳವೆ ಬಾವಿ ಕೊರೆಸಿದ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿ ತಕರಾರು ಆಗಿರುವುದರಿಂದ ನಮೂದಿಸಿಲ್ಲ ಎಂದು ಹೇಳುತ್ತಾರೆ.

ನಿಪಿ-7 ನನಗೆ ಸೇರಿದ 2 ಎಕರೆ ಸ್ವಂತ ಜಮೀನಿನ ದಾಖಲೆಯಾಗಿದೆ. ನಿಪಿ-7 ನ್ನು ನೀವೇ ಬರೆಸಿಕೊಂಡು ಬಂದಿದ್ದು ಎಂದರೆ ಸರಿ. ಕಂದಾಯವನ್ನು ಸ.ನಂ.47/35 ಪಿ1 ಕ್ಕೆ ಕಟ್ಟಿರುತ್ತೇನೆ. ಈಗ್ಗೆ 4-5 ವರ್ಷಗಳ ಹಿಂದೆ 150 ರೂ. ಗಳ ಕಂದಾಯವನ್ನು ಪಾವತಿ ಮಾಡಿರುತ್ತೇನೆ. ನಿಪಿ-8 ನಿಮ್ಮ ಜಮೀನಿಗೆ ಸೇರಿದ ಕಂದಾಯ ಪಾವತಿ ಮಾಡಿದ ದಾಖಲಾತಿ ಎಂದರೆ ಸರಿ. ನಿಮ್ಮ ಜಮೀನಿಗೆ ಎಷ್ಟು ಕಂದಾಯ ಕಟ್ಟುತ್ತೀರಾ ಎಂದರೆ ಸಾಕ್ಷಿ 150/- ಎಂದು ಹೇಳುತ್ತಾರೆ. ನಿಪಿ-9, ಸ.ನ.47/34, 2 ಎಕರೆ ಜಮೀನಿಗೆ 300/- ಕಂದಾಯವನ್ನು ಕಟ್ಟಿರುತ್ತೀರಿ ಎಂದರೆ ಸರಿ. ನಿಪಿ-9 ನ್ನು 2015-16, ಒಂದು ವರ್ಷಕ್ಕೆ ಮಾತ್ರ ಪಾವತಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು, 10 ವರ್ಷದ್ದು ಎಂದು ಹೇಳುತ್ತಾರೆ.

ಪ್ರತಿವಾದಿಗಳು ಅಸಲು ದಾವೆ ನಂ.34/2013 ರಂತೆ ವಿಭಾಗಕ್ಕೆ ದಾವೆ ಹೂಡಿದ್ದು, ಅದು ಪುರಸ್ಕರಿಸಲಾಗಿದೆ ಎಂದರೆ ಸರಿ. ಅದರ ಆಧಾರದ ಮೇಲೆ ಭಾಗ ಕೋರಿ ಅಂತಿಮ ಡಿಕ್ರಿ ಅರ್ಜಿಯನ್ನು ಸಲ್ಲಿಸಿರುತ್ತಾರೆಂದರೆ ಸಾಕ್ಷಿ ನನ್ನ ಮೇಲೆ ಹಾಕಿಲ್ಲ ಎಂದು ಹೇಳುತ್ತಾರೆ. ಸದರಿ ಅಂತಿಮ ಡಿಕ್ರಿ ಅರ್ಜಿಯಂತೆ ಭೂ-ಮಾಪಕರು ಸ್ಥಳಕ್ಕೆ ಬಂದು ಭಾಗ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ವಿಚಾರ ನಿಮಗೆ ಗೊತ್ತು ಎಂದರೆ ಸರಿ. ಪ್ರತಿವಾದಿಗಳು ನಿಮಗೆ ಜಮೀನನ್ನು ನೋಡಿಕೊಳ್ಳಲು ಕೊಟ್ಟಿದ್ದು, ಮಾರಾಟ ಮಾಡಿಲ್ಲ, ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-2 ನ್ನು ದಾವಾ ಆಸ್ತಿ ನೋಡಿಕೊಳ್ಳಲು, ಅಭಿವೃದ್ಧಿ ಪಡಿಸಲು ಹಾಗೂ ಸಾಲ ಪಡೆಯಲು ಮಾತ್ರ ನಿಮಗೆ ಬರೆದುಕೊಡಲಾಗಿತ್ತು ಎಂದರೆ ಸರಿ. ನಿಪಿ-2 ನ್ನು ನೊಂದಣಿ ಸಹ ಮಾಡಿಸಲಾಗಿತ್ತು ಎಂದರೆ ಸರಿ. ನಿಪಿ-1 ರಿಂದ 9 ದಾಖಲೆಗಳನ್ನು ದಾವೆಗೋಸ್ಕರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ, ಅನ್ಯತಾ ಪಾಯಿದೆ ಹೊಂದಲು, ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿದ ಪರಿಹಾರ ಪಡೆಯಲು ನೀವು ಅರ್ಹರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು **2** ರಿಂದ **5** ನೇ ಪ್ರತಿವಾದಿ ಪರ ಶ್ರೀ ಎಸ್.ಹೆಚ್ ವಕೀಲರಿಂದಃ

ಕೂಗಿಸಲಾಯಿತು ಯಾರು ಬರದೇ ಇದ್ದುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.